# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 85* |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಎಂ. ನಾಗರಾಜು<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 11.08.2025 |
| ಉತ್ತರಿಸುವ ಸಚಿವರು | : | ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ e-PoS ತಂತ್ರಾಂಶದಲ್ಲಿ ದೋಷ ಇರುವ ಪ್ರಯುಕ್ತ ರಾಜ್ಯದ ಸುಮಾರು 1.5 ಕೋಟಿ ಪಡಿತರ ಚೀಟಿ ಹೊಂದಿದವರು ಮಾಹೆಯಾನ ಪಡಿತರ ಪಡೆಯಲು ಕಷ್ಟವಾಗುತ್ತಿರುವುದು ನಿಜವೇ; ಇದ್ದಲ್ಲಿ, ಪದೇ ಪದೇ ಈ ತಂತ್ರಾಂಶದಲ್ಲಿ ದೋಷ ಕಂಡು ಬರುತ್ತಿದ್ದು, ಇದನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ e-PoS ತಂತ್ರಾಂಶದಲ್ಲಿ ಯಾವುದೇ ದೋಷ ಇರುವುದಿಲ್ಲ ಹಾಗೂ ಪ್ರತಿ ಮಾಹೆ ಆಹಾರ ಧಾನ್ಯಗಳನ್ನು ಪಡಿತರ ಚೀಟಿದಾರರಿಗೆ ಯಾವುದೇ ತಾಂತ್ರಿಕ ಸಮಸ್ಯೆ ಇಲ್ಲದೆ ಪಡಿತರವನ್ನು ವಿತರಣೆ ಮಾಡಲಾಗುತ್ತಿದೆ. |
| ಆ | ರಾಜ್ಯದಲ್ಲಿರುವ ಹಲವು ನ್ಯಾಯ ಬೆಲೆ ಅಂಗಡಿಗಳಲ್ಲಿ ಅಕ್ರಮವಾಗಿ ಸರಕುಗಳ ಮಾರ್ಗ ಬದಲಾವಣೆ, ಕಪ್ಪು ಮಾರುಕಟ್ಟೆಯಲ್ಲಿ ಸರಕುಗಳ ಮಾರಾಟ ಇನ್ನಿತರೇ ಚಟುವಟಿಕೆಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಜ್ಯದಲ್ಲಿರುವ ನ್ಯಾಯಬೆಲೆ ಅಂಗಡಿಗಳಲ್ಲಿ ಅಕ್ರಮವಾಗಿ ಸರಕುಗಳ ಮಾರ್ಗ ಬದಲಾವಣೆ ಕುರಿತು ಯಾವುದೇ ಪ್ರಕರಣಗಳು ವರದಿಯಾಗಿರುವುದಿಲ್ಲ. ಮುಂದುವರೆದು ಕಪ್ಪು ಮಾರುಕಟ್ಟೆಯಲ್ಲಿ ಸರಕುಗಳ ಮಾರಾಟ ಇನ್ನಿತರೇ ಚಟುವಟಿಕೆಗಳು ನಡೆಯುತ್ತಿರುವ ಬಗ್ಗೆ ಪ್ರಕರಣಗಳು ದಾಖಲಾಗಿರುತ್ತವೆ. |
| ಇ | ಇದ್ದಲ್ಲಿ ಈ ಕುರಿತು ಕೈಗೊಂಡಿರುವ ಕ್ರಮಗಳೇನು; | ಕಪ್ಪು ಮಾರುಕಟ್ಟೆಯಲ್ಲಿ ಸರಕುಗಳ ಮಾರಾಟ ಇನ್ನಿತರೇ ಚಟುವಟಿಕೆಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ರಾಜ್ಯಾದ್ಯಂತ ಅಗತ್ಯ ವಸ್ತುಗಳ ಕಾಯ್ದೆ-1955 ರಡಿ 2024-25 ಮತ್ತು 2025-26 ನೇ ಸಾಲಿನಲ್ಲಿ ಕೈಗೊಂಡ ಕ್ರಮದ ಬಗ್ಗೆ ಮಾಹಿತಿಯನ್ನು ಅನುಬಂಧ-1 ಮತ್ತು 02 ರಲ್ಲಿ ಒದಗಿಸಲಾಗಿದೆ. |

| | | |
|---|---|---|
| ಈ | ನೀತಿ ಆಯೋಗದ ಪ್ರಕಾರ ರಾಜ್ಯದಲ್ಲಿರುವ ಬಡವರ ಸಂಖ್ಯೆ ಎಷ್ಟು; ಕರ್ನಾಟಕದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳು ಎಷ್ಟು; ಯಾವ ಕಾರಣಕ್ಕಾಗಿ ನೀತಿ ಆಯೋಗದ ಅಂಕಿ ಅಂಶಗಳು ಮತ್ತು ರಾಜ್ಯ ಬಿ.ಪಿ.ಎಲ್. ಜನಸಂಖ್ಯೆಯು ಹೊಂದಾಣಿಕೆಯಾಗದಿರಲು ಕಾರಣವೇನು; ಅನರ್ಹ ಬಿ.ಪಿ.ಎಲ್ ಕಾರ್ಡ್‌ಗಳು ಎಷ್ಟು ಇವೆ; ಅನರ್ಹ ಬಿ.ಪಿ.ಎಲ್ ಕಾರ್ಡ್‌ಗಳನ್ನು ರದ್ದುಪಡಿಸಲು ತೆಗೆದುಕೊಂಡ ಕ್ರಮವೇನು; ಅನರ್ಹ ಕಾರ್ಡ್‌ಗಳು ಇದ್ದರೂ ಸಂಬಂಧಪಟ್ಟ ಅಧಿಕಾರಿಗಳು ಕ್ರಮಕೈಗೊಳ್ಳದಿರಲು ಕಾರಣವೇನು? | ನೀತಿ ಆಯೋಗದ ವರದಿ ಪ್ರಕಾರ ಕರ್ನಾಟಕದಲ್ಲಿ 2021ನೇ ಸಾಲಿಗೆ ಅನ್ವಯವಾಗುವಂತೆ ಬಹು ಆಯಾಮದ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳು ಶೇ 7.58 ಇರುವುದಾಗಿ ತಿಳಿಸಿರುತ್ತದೆ.<br><br>ರಾಜ್ಯದಲ್ಲಿ ಚಾಲ್ತಿಯಲ್ಲಿರುವ ಆದ್ಯತಾ ಪಡಿತರ ಚೀಟಿಗಳ ವಿವರ ಈ ಕೆಳಕಂಡಂತಿರುತ್ತದೆ.<br><br>(see table below)<br><br>ರಾಜ್ಯದಲ್ಲಿ ಆದ್ಯತಾ ಪಡಿತರ ಚೀಟಿಗಳನ್ನು ಪಡೆಯುವ ಬಗ್ಗೆ ಸರ್ಕಾರವು 2017 ರಲ್ಲಿ ಈ ಕೆಳಕಂಡಂತೆ ಹೊರಗಿಡುವ ಮಾನದಂಡಗಳನ್ನು ರೂಪಿಸಿದೆ.<br><br>➢ ವೇತನವನ್ನು ಗಣನೆಗೆ ತೆಗೆದುಕೊಳ್ಳದೆ ಎಲ್ಲಾ ಖಾಯಂ ನೌಕರರು ಅಂದರೆ ಸರ್ಕಾರದ ಅಥವಾ ಸರ್ಕಾರದಿಂದ ಅನುದಾನವನ್ನು ಪಡೆಯುತ್ತಿರುವ ಸಂಸ್ಥೆಗಳು ಅಥವಾ ಸರ್ಕಾರಿ ಪ್ರಾಯೋಜಿತ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು/ ಮಂಡಳಿಗಳು/ ನಿಗಮಗಳು/ ಸ್ವಾಯತ್ತ ಸಂಸ್ಥೆಗಳು ಇತ್ಯಾದಿ ಒಳಗೊಂಡಂತೆ ಆದಾಯ ತೆರಿಗೆ/ಸೇವಾ ತೆರಿಗೆ/ ವ್ಯಾಟ್/ವೃತ್ತಿ ತೆರಿಗೆ ಪಾವತಿಸುವ ಎಲ್ಲಾ ಕುಟುಂಬಗಳು.<br><br>➢ ಗ್ರಾಮೀಣ ಪ್ರದೇಶಗಳಲ್ಲಿ 03 ಹೆಕ್ಟರ್ ಒಣಭೂಮಿ ಅಥವಾ ತತ್ಸಮಾನ ನೀರಾವರಿ ಭೂಮಿ ಹೊಂದಿರುವ ಕುಟುಂಬಗಳು ಅಥವಾ ಗ್ರಾಮೀಣ ಪ್ರದೇಶವನ್ನು ಹೊರತುಪಡಿಸಿ ನಗರ ಪ್ರದೇಶಗಳಲ್ಲಿ 1000 ಚದರ ಅಡಿಗಿಂತಲೂ ಹೆಚ್ಚಿನ ವಿಸ್ತೀರ್ಣದ ಪಕ್ಕಾ ಮನೆಯನ್ನು ಸ್ವಂತವಾಗಿ ಹೊಂದಿರುವ ಕುಟುಂಬಗಳು. |

| ವಿವರ | ಪಡಿತರ ಚೀಟಿ ಸಂಖ್ಯೆ | ಪಡಿತರ ಚೀಟಿ ಫಲಾನುಭವಿಗಳ ಸಂಖ್ಯೆ |
|---|---|---|
| ಅಂತ್ಯೋದಯ ಅನ್ನ ಪಡಿತರ ಚೀಟಿ | 10,76,942 | 43,96,248 |
| ಆದ್ಯತಾ ಪಡಿತರ ಚೀಟಿ | 1,17,31,508 | 4,09,75,963 |
| ಆದ್ಯತೇತರ ಪಡಿತರ ಚೀಟಿ | 25,67,419 | 87,41,704 |
| ಒಟ್ಟು | 1,53,65,869 | 5,41,13,915 |

| | | |
|---|---|---|
| | | ➢ ಜೀವನೋಪಾಯಕ್ಕಾಗಿ ಸ್ವತಃ ಓಡಿಸುವ ಒಂದು ವಾಣಿಜ್ಯ ವಾಹನವನ್ನು ಅಂದರೆ ಟ್ರಾಕ್ಟರ್, ಮ್ಯಾಕ್ಸಿಕ್ಯಾಬ್, ಟ್ಯಾಕ್ಸಿ ಇತ್ಯಾದಿಗಳನ್ನು ಹೊಂದಿದ ಕುಟುಂಬವನ್ನು ಹೊರತುಪಡಿಸಿ ನಾಲ್ಕು ಚಕ್ರದ ವಾಹನಗಳನ್ನು ಹೊಂದಿರುವ ಎಲ್ಲಾ ಕುಟುಂಬಗಳು.<br>➢ ಕುಟುಂಬದ ವಾರ್ಷಿಕ ಆದಾಯವು ರೂ. **1.20** ಲಕ್ಷಗಳಿಗಿಂತಲೂ ಹೆಚ್ಚು ಇರುವ ಕುಟುಂಬಗಳು.<br><br>ಮೇಲ್ಕಂಡ ಮಾನದಂಡಗಳ ಆಧಾರದ ಮೇಲೆ ರಾಜ್ಯದಲ್ಲಿ ಆದ್ಯತಾ ಪಡಿತರ ಚೀಟಿಯನ್ನು ವಿತರಿಸಲು ಕ್ರಮವಹಿಸಲಾಗಿರುತ್ತದೆ.<br><br>ಆದರೆ ನೀತಿ ಆಯೋಗದ ಅಂಕಿ ಅಂಶಗಳು ರಾಜ್ಯ ಬಿಪಿಎಲ್ ಜನಸಂಖ್ಯೆಯು ಹೊಂದಾಣಿಕೆಯಾಗದಿರಲು ರಾಜ್ಯದಲ್ಲಿ ಆದ್ಯತಾ ಪಡಿತರ ಚೀಟಿ ಪಡೆಯಲು ರೂಪಿಸಿರುವ ಮಾನದಂಡಗಳು ಹಾಗೂ ನೀತಿ ಆಯೋಗದವರು ರೂಪಿಸಿರುವ ಮಾನದಂಡಗಳು ಬೇರೆಯಾಗಿರುತ್ತದೆ. ರಾಜ್ಯದಲ್ಲಿ ಆದ್ಯತಾ ಪಡಿತರ ಚೀಟಿಗಳನ್ನು ನೀಡಲು ಹೊರಗಿಡುವ ಮಾನದಂಡಗಳನ್ನು ರೂಪಿಸಲಾಗಿರುತ್ತದೆ. ಆದರೆ ನೀತಿ ಆಯೋಗದಿಂದ ಬಹು ಆಯಾಮಿನ ಬಡತನ ರೇಖೆಯಲ್ಲಿರುವ ಜನರನ್ನು ಗುರುತಿಸಲು ಮಾನದಂಡಗಳನ್ನು ರೂಪಿಸಲಾಗಿರುತ್ತದೆ.<br><br>ಅನರ್ಹ ಪಡಿತರ ಚೀಟಿಗಳನ್ನು ಪತ್ತೆ ಹಚ್ಚುವ ಕಾರ್ಯ ನಿರಂತರವಾಗಿ ನಡೆಯುತ್ತಿದ್ದು **2024** ರ ಜುಲೈ ಮಾಹೆಯಲ್ಲಿ ಆದ್ಯತಾ ಪಡಿತರ ಚೀಟಿ ಪಡೆಯಲು ನಿಗದಿಪಡಿಸಿರುವ ಮಾನದಂಡಗಳ ವಿರುದ್ಧವಾಗಿ ಪಡಿತರ ಚೀಟಿ ಪಡೆದ ಆದಾಯ ತೆರಿಗೆ ಪಾವತಿದಾರರು, ಸರ್ಕಾರಿ ನೌಕರರು, **1.20** ಲಕ್ಷಕ್ಕಿಂತ ಹೆಚ್ಚು ಇರುವ ಕುಟುಂಬಗಳು ಹಾಗೂ **6** ತಿಂಗಳಿಗಿಂತ ಹೆಚ್ಚು ಅವಧಿಗೆ ಪಡಿತರ ಪಡೆಯದೇ ಇರುವ ಒಟ್ಟು **3,62,254**ಪಡಿತರ ಚೀಟಿದಾರರ ವಿವರಗಳನ್ನು ಕುಟುಂಬ ತಂತ್ರಾಂಶದಿಂದ ಪಡೆದು ಸದರಿ ಪಡಿತರ ಚೀಟಿಗಳನ್ನು ರದ್ದು/ಆದ್ಯತೇತರ ಪಡಿತರ ಚೀಟಿಗಳನ್ನಾಗಿ ಪರಿವರ್ತಿಸಲು ಕ್ರಮವಹಿಸಲಾಗಿತ್ತು.<br><br>ಸರ್ಕಾರದ ಪತ್ರ ಸಂಖ್ಯೆ: ಆನಾಸ **337** ಡಿಆರ್ಎ **2024**, ದಿನಾಂಕ:**22-11-2024**ರ ಪತ್ರದಲ್ಲಿನ ನಿರ್ದೇಶನದನ್ವಯ ಐ.ಟಿ. ತೆರಿಗೆ ಪಾವತಿದಾರರು ಹಾಗೂ ಸರ್ಕಾರಿ ನೌಕರರನ್ನು ಹೊರತುಪಡಿಸಿ ಉಳಿದ ಎಲ್ಲಾ ಪಡಿತರ ಚೀಟಿಗಳನ್ನು ಆದ್ಯತಾ ಪಡಿತರ ಚೀಟಿಗಳನ್ನಾಗಿ ಮರು ಸ್ಥಾಪಿಸಲಾಗಿರುತ್ತದೆ. |

| | | |
|---|---|---|
| | | ರಾಜ್ಯದಲ್ಲಿ ಚಾಲ್ತಿಯಲ್ಲಿರುವ ಪಡಿತರ ಚೀಟಿಗಳಲ್ಲಿ ಈ ಕೆಳಕಂಡಂತೆ ಶಂಕಾಸ್ಪದ (Suspect RC) ಪಡಿತರ ಚೀಟಿಗಳನ್ನು ಗುರುತಿಸಲಾಗಿರುತ್ತದೆ. |

| ಕ್ರ. ಸಂ | ವಿವರ | ಪಡಿತರ ಚೀಟಿಗಳ ಸಂಖ್ಯೆ | ಫಲಾನುಭವಿಗಳ ಸಂಖ್ಯೆ |
|---|---|---|---|
| 1 | ಮೃತ ಸದಸ್ಯರು (Deceased Members) | 1,446 | 1,452 |
| 2 | ಅಂತರ ರಾಜ್ಯ ಪಡಿತರ ಚೀಟಿದಾರರ ಸಂಖ್ಯೆ (Duplicate RC Inter State ) | 57,864 | 73,859 |
| 3 | ಅಂತರ್‌ರಾಜ್ಯ ಪಡಿತರ ಚೀಟಿದಾರರ ಸಂಖ್ಯೆ (Duplicate RC Intra State) | 365 | 430 |
| 4 | ಜಿ.ಎಸ್.ಟಿ ಒಟ್ಟು 25 ಲಕ್ಷ ವಹಿವಟು ಮೀರಿದವರು (GSTN Gross Turnover 25 Lacs) | 2,684 | 2,695 |
| 5 | 1.20 ಲಕ್ಷಕ್ಕಿಂತ ಹೆಚ್ಚು ಆದಾಯ ಹೊಂದಿರುವವರು (Income Group Annual Income 1,20,000) | 513,613 | 580,415 |
| 6 | ಕಂಪನಿಗಳಲ್ಲಿ ಡೈರೆಕ್ಟರ್ ಆಗಿರುವವರು (MCA Individual as Director) | 19,690 | 21,402 |
| 7 | ಪಿಎಂ ಕಿಸಾನ್ ಲ್ಯಾಂಡ್ ಹೋಲ್ಡಿಂಗ್ 7.5 ಎಕರೆ (PM KISAN Land Holding 7.5 Acre) | 33,456 | 34,710 |
| 8 | 06 ತಿಂಗಳಿಗಿಂತ ಹೆಚ್ಚಿನ ಅವಧಿಗೆ ಪಡಿತರ ಪಡೆಯದೇ ಇರುವವರು (Ration Not Collected for more than 6 months) | 19,893 | 58,247 |
| 9 | 100 ವರ್ಷ ವಯೋಮಿತಿ ದಾಟಿರುವ ಪಡಿತರದಾರರು (RC Member Above 100 Years) | 2,040 | 2,050 |
| 10 | 18 ವರ್ಷ ವಯಸ್ಸಿಗಿಂತ ಕೆಳಗಿರುವ ಏಕ ಸದಸ್ಯ ಪಡಿತರದಾರರು (Single Member Below 18 Years) | 731 | 793 |
| 11 | ಸ್ವಂತ ಉಪಯೋಗಕ್ಕಾಗಿ ಸ್ವಂತ ವಾಹನ ಹೊಂದಿರುವವರು (Vehicle Ownership value Owning) | 119 | 153 |

| | | | |
|---|---|---|---|
| 12 | ಇ-ಕೆವೈಸಿ ಮಾಡಿಸದೇ ಇರುವವರು (E-KYC pending as on 05.08.2025) | 616,196 | 783,706 |
| | ಒಟ್ಟು | 12,68,097 | 15,59,912 |

ಸದರಿ ಪಡಿತರ ಚೀಟಿ/ ಫಲಾನುಭವಿಗಳನ್ನು ಜಿಲ್ಲಾ/ ತಾಲ್ಲೂಕು ಮಟ್ಟದಲ್ಲಿ ಆಹಾರ ನಿರೀಕ್ಷಕರ ಹಂತದಲ್ಲಿ ಪರಿಶೀಲನೆ ಮಾಡಿ ಸೂಕ್ತ ಕ್ರಮ ಕೈಗೊಳ್ಳಲು ಕ್ರಮವಹಿಸಲಾಗುತ್ತಿದೆ.

ಸಂಖ್ಯೆ: ಇ-ಆನಾಸ 196 ಡಿಆರ್ಎ 2025

(ಕೆ.ಹೆಚ್. ಮುನಿಯಪ್ಪ)
ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ
ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ
ಇಲಾಖಾ ಸಚಿವರು

## ಅನುಬಂಧ-01

### ಅಗತ್ಯ ವಸ್ತುಗಳ ಕಾಯ್ದೆ 1955 ರಡಿ ವಶಪಡಿಸಿಕೊಂಡ ಅಗತ್ಯ ವಸ್ತುಗಳ ವಿವರ (ದಿಃ01.04.2024 ರಿಂದ 31.03.2025ರ ವರೆಗೆ)

| ದಾಳಿಮಾಡಲಾದ ಪ್ರಕರಣಗಳ ಸಂಖ್ಯೆ | ದಾಖಲಾದ ಎಫ್.ಐ.ಆರ್ ಪ್ರಕರಣಗಳ ಸಂಖ್ಯೆ | ಬಂದನಕ್ಕೆ ಒಳಗಾದ ಆರೋಪಿಗಳ ಸಂಖ್ಯೆ | ವಶಪಡಿಸಿಕೊಂಡ ಆಹಾರ ಧಾನ್ಯಗಳ ವಿವರ | | | | | | | | | | | | | |
|---|---|---|---|---|---|---|---|---|---|---|---|---|---|---|---|---|
| | | | ಅಕ್ಕಿ | | ಗೋದಿ | | ಸಕ್ಕರೆ | | ರಾಗಿ | | ಜೋಳ | | ಬೆಳೆಕಾಳುಗಳು | | ಒಟ್ಟು ಅಗತ್ಯ ವಸ್ತುಗಳ ಪ್ರಮಾಣ ಮತ್ತು ಮೌಲ್ಯ | |
| | | | ಪ್ರಮಾಣ (ಕ್ವಿಂಟಾಲ್ ಗಳಲ್ಲಿ) | ಮೌಲ್ಯ (ರೂಗಳಲ್ಲಿ) | ಪ್ರಮಾಣ (ಕ್ವಿಂಟಾಲ್ ಗಳಲ್ಲಿ) | ಮೌಲ್ಯ (ರೂಗಳಲ್ಲಿ) | ಪ್ರಮಾಣ (ಕ್ವಿಂಟಾಲ್ ಗಳಲ್ಲಿ) | ಮೌಲ್ಯ (ರೂಗಳಲ್ಲಿ) | ಪ್ರಮಾಣ (ಕ್ವಿಂಟಾಲ್ ಗಳಲ್ಲಿ) | ಮೌಲ್ಯ (ರೂಗಳಲ್ಲಿ) | ಪ್ರಮಾಣ (ಕ್ವಿಂಟಾಲ್ ಗಳಲ್ಲಿ) | ಮೌಲ್ಯ (ರೂಗಳಲ್ಲಿ) | ಪ್ರಮಾಣ (ಕ್ವಿಂಟಾಲ್ ಗಳಲ್ಲಿ) | ಮೌಲ್ಯ (ರೂಗಳಲ್ಲಿ) | ಪ್ರಮಾಣ (ಕ್ವಿಂಟಾಲ್ ಗಳಲ್ಲಿ) | ಮೌಲ್ಯ (ರೂಗಳಲ್ಲಿ) |
| 508 | 402 | 505 | 12035.657 | 39755912 | 340.53 | 1201305 | 0 | 0 | 93.01 | 354511 | 511.95 | 1730595 | 221 | 1768000 | 13202.15 | 44810323 |

| ವಶಪಡಿಸಿಕೊಂಡ ಪೆಟ್ರೋಲ್ / ಡಿಸೇಲ್/ಎಲ್ ಪಿ ಜಿ ವಿವರ | | | | | | | | | |
|---|---|---|---|---|---|---|---|---|---|
| ಪೆಟ್ರೋಲ್ | | ಡೀಸಲ್ | | ಎಲ್.ಪಿ.ಜಿ. | | ಇತರೆ (ಎಲ್‌ಪಿಜಿ ರಿಫಿಲಿಂಗ್ ವಸ್ತುಗಳು) | | ಒಟ್ಟು ಅಗತ್ಯ ವಸ್ತುಗಳ ಪ್ರಮಾಣ ಮತ್ತು ಮೌಲ್ಯ | |
| ಪ್ರಮಾಣ (ಲೀಟರ್) | ಮೌಲ್ಯ (ರೂಗಳಲ್ಲಿ) | ಪ್ರಮಾಣ (ಲೀಟರ್) | ಮೌಲ್ಯ (ರೂಗಳಲ್ಲಿ) | ಪ್ರಮಾಣ (ಕೆಜಿ) | ಮೌಲ್ಯ (ರೂಗಳಲ್ಲಿ) | ಪ್ರಮಾಣ (ಸಂಖ್ಯೆ) | ಮೌಲ್ಯ (ರೂಗಳಲ್ಲಿ) | ಪ್ರಮಾಣ | ಮೌಲ್ಯ (ರೂಗಳಲ್ಲಿ) |
| 0 | 0 | 3282 | 297490 | 6183 | 9174017 | 42 | 39884 | 9507 | 9461391 |

| ವಶಪಡಿಸಿಕೊಂಡ ವಾಹನಗಳ ವಿವರ | | | | ಒಟ್ಟಾರೆ ಮೌಲ್ಯ |
|---|---|---|---|---|
| ವಾಹನ | | ಒಟ್ಟು | | |
| ಪ್ರಮಾಣ (ಸಂಖ್ಯೆ) | ಮೌಲ್ಯ (ರೂಗಳಲ್ಲಿ) | ಪ್ರಮಾಣ (ಸಂಖ್ಯೆ) | ಮೌಲ್ಯ (ರೂಗಳಲ್ಲಿ) | |
| 204 | 52938360 | 204 | 52938360 | 107210074 |

ಉಪ ನಿರ್ದೇಶಕರು (ನಾಸ&ಗ್ರಾವ್ಯ),
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಇಲಾಖೆ,
ಬೆಂಗಳೂರು.

## ಅನುಬಂಧ-02

### ಅಗತ್ಯ ವಸ್ತುಗಳ ಕಾಯ್ದೆ 1955 ರಡಿ ವಶಪಡಿಸಿಕೊಂಡ ಅಗತ್ಯ ವಸ್ತುಗಳ ವಿವರ (ದಿಃ01.04.2025 ರಿಂದ 30.06.2025ರ ವರೆಗೆ)

| ದಾಳಿಮಾಡಲಾದ ಪ್ರಕರಣಗಳ ಸಂಖ್ಯೆ | ದಾಖಲಾದ ಎಫ್.ಐ.ಆರ್ ಪ್ರಕರಣಗಳ ಸಂಖ್ಯೆ | ಬಂದನಕ್ಕೆ ಒಳಗಾದ ಆರೋಪಿಗಳ ಸಂಖ್ಯೆ | ವಶಪಡಿಸಿಕೊಂಡ ಆಹಾರ ಧಾನ್ಯಗಳ ವಿವರ | | | | | | | | | | | | | |
|---|---|---|---|---|---|---|---|---|---|---|---|---|---|---|---|---|
| | | | ಅಕ್ಕಿ | | ಗೋದಿ | | ಸಕ್ಕರೆ | | ರಾಗಿ | | ಜೋಳ | | ಬೆಳೆಕಾಳುಗಳು | | ಒಟ್ಟು ಅಗತ್ಯ ವಸ್ತುಗಳ ಪ್ರಮಾಣ ಮತ್ತು ಮೌಲ್ಯ | |
| | | | ಪ್ರಮಾಣ (ಕ್ವಿಂಟಾಲ್ ಗಳಲ್ಲಿ) | ಮೌಲ್ಯ (ರೂಗಳಲ್ಲಿ) | ಪ್ರಮಾಣ (ಕ್ವಿಂಟಾಲ್ ಗಳಲ್ಲಿ) | ಮೌಲ್ಯ (ರೂಗಳಲ್ಲಿ) | ಪ್ರಮಾಣ (ಕ್ವಿಂಟಾಲ್ ಗಳಲ್ಲಿ) | ಮೌಲ್ಯ (ರೂಗಳಲ್ಲಿ) | ಪ್ರಮಾಣ (ಕ್ವಿಂಟಾಲ್ ಗಳಲ್ಲಿ) | ಮೌಲ್ಯ (ರೂಗಳಲ್ಲಿ) | ಪ್ರಮಾಣ (ಕ್ವಿಂಟಾಲ್ | ಮೌಲ್ಯ (ರೂಗಳಲ್ಲಿ) | ಪ್ರಮಾಣ (ಕ್ವಿಂಟಾಲ್ ಗಳಲ್ಲಿ) | ಮೌಲ್ಯ (ರೂಗಳಲ್ಲಿ) | ಪ್ರಮಾಣ (ಕ್ವಿಂಟಾಲ್ ಗಳಲ್ಲಿ) | ಮೌಲ್ಯ (ರೂಗಳಲ್ಲಿ) |
| 247 | 188 | 213 | 7924.27 | 17476396 | 200 | 720000 | 0 | 0 | 38.48 | 161464 | 0 | 0 | 0 | 0 | 8162.75 | 18357860 |

| ಪೆಟ್ರೋಲ್ / ಡಿಸೇಲ್/ಎಲ್ ಪಿ ಜಿ ಅಗತ್ಯ ವಸ್ತುಗಳ ವಿವರ | | | | | | | | | |
|---|---|---|---|---|---|---|---|---|---|
| ಪೆಟ್ರೋಲ್ | | ಡೀಸಲ್ | | ಎಲ್.ಪಿ.ಜಿ. | | ಇತರೆ(ಎಲ್‌ಪಿಜಿ ರಿಫಿಲಿಂಗ್ ವಸ್ತುಗಳು) | | ಒಟ್ಟು ಅಗತ್ಯ ವಸ್ತುಗಳ ಪ್ರಮಾಣ ಮತ್ತು ಮೌಲ್ಯ | |
| ಪ್ರಮಾಣ (ಲೀಟರ್) | ಮೌಲ್ಯ (ರೂಗಳಲ್ಲಿ) | ಪ್ರಮಾಣ (ಲೀಟರ್) | ಮೌಲ್ಯ (ರೂಗಳಲ್ಲಿ) | ಪ್ರಮಾಣ (ಕೆಜಿ) | ಮೌಲ್ಯ (ರೂಗಳಲ್ಲಿ) | ಪ್ರಮಾಣ (ಸಂಖ್ಯೆ) | ಮೌಲ್ಯ (ರೂಗಳಲ್ಲಿ) | ಪ್ರಮಾಣ | ಮೌಲ್ಯ (ರೂಗಳಲ್ಲಿ) |
| 0 | 0 | 0 | 0 | 1648 | 2459871 | 219.25 | 226426 | 1867.25 | 2686297 |

| ವಶಪಡಿಸಿಕೊಂಡ ವಾಹನಗಳ ವಿವರ | | | | ಒಟ್ಟಾರೆ ಮೌಲ್ಯ |
|---|---|---|---|---|
| ವಾಹನ | | ಒಟ್ಟು | | |
| ಪ್ರಮಾಣ (ಸಂಖ್ಯೆ) | ಮೌಲ್ಯ (ರೂಗಳಲ್ಲಿ) | ಪ್ರಮಾಣ (ಸಂಖ್ಯೆ) | ಮೌಲ್ಯ (ರೂಗಳಲ್ಲಿ) | |
| 109 | 28925300 | 109 | 28925300 | 47276978 |

ಉಪ ನಿರ್ದೇಶಕರು (ನಾಸ&ಗ್ರಾವ್ಯ),
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಇಲಾಖೆ,
ಬೆಂಗಳೂರು.